**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಬನಹಟ್ಟಿ**

**ಸಿಸಿ.575/2025**
**ಸಿ.ಡಬ್ಲ್ಯೂ:15 ಪಿ.ಡಬ್ಲ್ಯೂ: 12**

| | | |
|---|---|---|
| ಸಾಕ್ಷಿದಾರರ ಹೆಸರು | ವಿಜಯ ಕಾಂಬಳೆ | |
| ತಂದೆ ಹೆಸರು | ಸದಾಶಿವ | |
| ವಯಸ್ಸು | 33 | ವರ್ಷ |
| ಉದ್ಯೋಗ | ಪೊಲೀಸ ಇನ್ ಸ್ಪೆಕ್ಟರ್, ಹುಬ್ಬಳ್ಳಿ | |
| ವಾಸಸ್ಥಳ | ಹುಬ್ಬಳ್ಳಿ | |

ಸಾಕ್ಷಿಯನ್ನು ಇಂದು ದಿನಾಂಕಃ **19-01-2026** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ

ದಿಃ 27-09-2023 ರಿಂದ 06-08-2025 ರವರೆಗೆ ನಾನು ಬನಹಟ್ಟಿ ಪೊಲೀಸ ಠಾಣೆಯಲ್ಲಿ ಪಿಎಸ್ಐ (ಕಾ ಸು)ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 11-04-2025 ರಂದು ಸಂಜೆ 4.45 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾರಿ ನೀಡಿದ ದಸ್ತುರ ಪಿರ್ಯಾದಿಯನ್ನು ಪಡೆದು ಠಾಣಾ ಗುನ್ನಾ ಸಂಖ್ಯೆಃ 53/2025 ಕಲಂ 303 (2) ಬಿ ಎನ್ ಎಸ್ ಅಡಿ ದಾಖಲಿಸಿಕೊಂಡು , ಮೂಲ ಪ್ರ ವ ವ ಅನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

3. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿನೀಡಿ ಚಾಸಾ-2 ಮತ್ತು 3 ರವರನ್ನು ಕರೆಯಿಸಿಕೊಂಡು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಸಂಜೆ 6.15 ಗಂಟೆಯಿಂದ 7 ರವರೆಗೆ ಜರುಗಿಸಿ , ಛಾಯಾಚಿತ್ರವನ್ನು ತೆಗೆಯಲಾಯಿತು.

4. ಅದೇ ದಿನ ಚಾಸಾ-8 ಮತ್ತು 9 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

5. ದಿಃ 12-04-2023 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-14 , ಹೆಚ್.ಸಿ 427 ರವರು ಕೂಡಿ ಆಸಂಗಿ ಕ್ರಾಸ ಹತ್ತಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಬನಹಟ್ಟಿ ಕಡೆಯಿಂದ ಒಬ್ಬ ವ್ಯಕ್ತಿ ಹೀರೋ ಸ್ಪೆಂಡರ ಪ್ಲಸ್ ಮೇಲೆ ಬಂದಿದ್ದು ಆತನ ಮೋಟಾರ ಸೈಕಲನ್ನು ತಡೆ ಹಿಡಿದು ನೋಡಲಾಗಿ ಸದರಿ ಮೋಟಾರ ಸೈಕಲಿಗೆ ನೋಂದಣಿ ಸಂಖ್ಯೆ ಇರಲಿಲ್ಲ.

ಸದರಿ ವ್ಯಕ್ತಿಗೆ ದಾಖಲಾತಿಗಳ ಕುರಿತು ವಿಚಾರಿಸಲಾಗಿ ಅವನು ಯಾವುದೇ ದಾಖಲಾತಿ ಇರುವುದಿಲ್ಲ ಅಂತ ತಿಳಿಸಿದ್ದು , ನಮಗೆ ಸಂಶಯ ಬಂದಿದ್ದು ಆತನಿಗೆ ಮೋಟಾರ ಸೈಕಲ ಕುರಿತು ವಿಚಾರಿದಾಗ ಸದರಿಯವನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಸಂಶಯ ಬಂದು ಸದರಿ ವ್ಯಕ್ತಿಯನ್ನು ಠಾಣೆಗೆ ಕರೆದುಕೊಂಡು ಹೋಗಿ ವಿಚಾರಿಸಲಾಗಿ , ಸದರಿ ಮೋಟಾರ ಸೈಕಲನ್ನು ದಿಃ 24-03-2025 ರಂದು ರಾತ್ರಿ 8.30 ಗಂಟೆಗೆ ಚಿಮ್ಮಡದ ನೀರಿನ ಟ್ಯಾಂಕ ಹತ್ತಿರ ನಿಲ್ಲಿಸಿದ್ದು ಕಳ್ಳತನ ಮಾಡಿದ್ದಾಗಿ ತಿಳಿಸಿರುತ್ತಾನೆ. ಸದರಿ ಮೋಟಾರ ಸೈಕಲ ಬನಹಟ್ಟಿ ಪೊಲೀಸ ಠಾಣೆಯಲ್ಲಿ ಗುನ್ನಾ ಸಂಖ್ಯೆಃ 53/2025 ಪ್ರಕರಣದಲ್ಲಿ ಬೇಕಾಗಿ ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ತನ್ನ ಹೆಸರು ಮಹಾಂತೇಶ ಕೃಷ್ಣಪ್ಪ ಬಿಸ್ತನ್ನವರ ಸಾ. ಸತ್ತಿ ಎಂದು ತಿಳಿಸಿದನು. ನಂತರ ಆತನನ್ನು ವಶಕ್ಕೆ ಪಡೆದು ದಸ್ತಗಿರಿ ನಿಯವು ಪಾಲಿಸಿ , ಸಿಕ್ಕ ಮೋಟಾರ ಸೈಕಲನ್ನು ಠಾಣೆಯಲ್ಲಿ ಪಂಚರ ಸಮಕ್ಷಮ ಜಪ್ತು ಮಾಡಿ ಪಂಚನಾಮೆಯನ್ನು ಜರುಗಿಸಿ, ಸದರಿ ಮಹಾಂತೇಶನ ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡು ಸದರಿ ಹೇಳಿಕೆಯಲ್ಲಿ ತಾನು ಇನ್ನೂ 8 ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿದ್ದು , ಅವುಗಳನ್ನು ನಾವಲಗಿ ಗ್ರಾಮದ ತನ್ನ ಸಂಬಂಧಿಕರ ತೋಟದಲ್ಲಿ ಬಚ್ಚಿಟ್ಟಿರವುದಾಗಿ ಹಾಗೂ ತನ್ನ ಜೊತೆಗೆ ಬಂದರೇ ತೋರಿಸುವುದಾಗಿ ಹೇಳಿರುತ್ತಾನೆ. ಸ್ವ ಖುಷಿ ಹೇಳಿಕೆಯ ಆದಾರದ ಮೇಲೆ ಚಾಸಾ-6 ಮತ್ತು 7 ರವರ ಸಮಕ್ಷಮ ಆರೋಪಿತನು ಬಚ್ಚಿಟ್ಟಿದ ಸ್ಥಳಕ್ಕೆ ಹೋಗಿ ನೋಡಲಾಗಿ ಆರೋಪಿತ ತಾನ ಬಚ್ಚಿಟ್ಟ ಮೋಟಾರ ಸೈಕಲಗಳನ್ನು ತೋರಿಸಿದ್ದು ಸದ ರಿಮೋಟಾಟ ಸೈಕಲಗಳನ್ನು ಜಪ್ತು ಪಡಿಸಿಕೊಂಡು ಜಪ್ತು ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 4.30 ರವರೆಗೆ ಜರುಗಿಸಿ ಛಾಯಾಚಿತ್ರವನ್ನು ಪಡೆಯಲಾಯಿತು.

6. ನಂತರ ಅಲ್ಲಿಂದ ಆರೋಪಿತನು , ಪಿರ್ಯಾದಿದಾರನ ಮೊಟಾರ ಸೈಕಲ ಕಳ್ಳತನವಾದ ಸ್ಥಳವನ್ನು ತೋರಿಸಿದ್ದು ಸದರಿ ಜಾಗೆವು ಪಂಚನಾಮೆ ಚಾಸಾ-4 ಮತ್ತು 5 ರವರು ಸಮಕ್ಷಮ ಪಂಚನಾಮೆಯನ್ನು ಸಂಜೆ 4.45 ರಿಂದ 5.45 ರವರೆಗೆ ಜರುಗಿಸಲಾಯಿತು.

7. ಅದೇ ದಿನ ಜಪ್ತಾದ ಮೋಟಾರ ಸೈಕಲಗಳ ಕುರಿತು ಮಾನ್ಯ ನ್ಯಾಯಾಲಯಕ್ಕ ಪಿಎಫ್ ಅನ್ನು ಸಲ್ಲಿಸಲಾಯಿತು.

8. ನಂತರ ಸದರಿ ಆರೋಪಿತನ ದಸ್ತಗಿರ ನಿಯಮ ಪಾಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

9. ಅದೇ ದಿನ ಪ್ರಕರಣದ ಪಿರ್ಯಾದಿದಾರ ಮತ್ತು ಚಾಸಾ-8 , ಚಾಸಾ-9 ರವರ ಪುನರ್ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು.

10. ದಿಃ 04-05-2025 ರಂದು ಸದರಿ ಪ್ರಕರಣಲ್ಲಿ ಜಪ್ತಾದ ಮೋಟಾರ್ ಸೈಕಲ ಸಂಖ್ಯೆಃ KA-23-EV-1035 ನೇದ್ದರ ಮಾಲೀಕರು ಮಾನ್ಯ ನ್ಯಾಯಾಲಯದಿಂದ ಬಿಡುಗಡೆ ಆದೇಶವನ್ನು ಪಡೆದುಕೊಂಡು ಬಂದಿದ್ದು , ಸದರಿ ಆದೇಶದಂತೆ ಸದರಿ ವಾಹನವನ್ನು ಮಾಲೀಕರಿಗೆ ಬಿಡುಗಡೆಗೊಳಿಸಲಾಯಿತು.

11. ದಿಃ 05-05-2025 ಸದರಿ ಪ್ರಕರಣದಲ್ಲಿ ಮೋಟಾರ ಸೈಕಲ ಸಂಖ್ಯೆಃ KA-23-EF-6197 ನೇದ್ದರ ಮಾಲೀಕರಾದ ಅಶೋಕ ಶೇಷಗಿರಿ ಭೋವಿ (ಚಾಸಾ-12) ರವರಿಗೆ ಮಾನ್ಯ ನ್ಯಾಯಾಲಯದಿಂದ ಬಿಡುಗಡೆ ಆದೇಶವನ್ನು ಪಡೆದುಕೊಂಡು ಬಂದಿದ್ದು , ಸದರಿ ಆದೇಶದಂತೆ ಸದರಿ ವಾಹನವನ್ನು ಮಾಲೀಕರಿಗೆ ಬಿಡುಗಡೆಗೊಳಿಸಲಾಯಿತು.

12. ದಿಃ 14-05-2025 ರಂದು ಚಾಸಾ-1 ರವರ ಮೋಟಾರ ಸೈಕಲನ ಕುರಿತು ಮಾನ್ಯ ನ್ಯಾಯಾಲಯದಿಂದ ಬಿಡುಗಡೆ ಆದೇಶವನ್ನು ಪಡೆದುಕೊಂಡು ಬಂದಿದ್ದು , ಸದರಿ ಆದೇಶದಂತೆ ಸದರಿ ವಾಹನವನ್ನುಚಾಸಾ-1 ರವರಿಗೆ ಬಿಡುಗಡೆಗೊಳಿಸಲಾಯಿತು.

13. ದಿಃ 19-05-2025 ರಂದು ಚಾಸಾ-13 ರವರು ಸದರಿ ಪ್ರಕರಣದಲ್ಲಿ ಛಾಯಾಚಿತ್ರಗಳನ್ನು ತೆಗೆದುಕೊಂಡು ಅವುಗಳನ್ನು ಪ್ರಿಂಟ ತೆಗೆದು ಪ್ರಮಾಣಪತ್ರವನ್ನು ನೀಡಿದ್ದು ಸದರಿಯವುಗಳನ್ನು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು.

14. ಅದೇ ದಿನ ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷ್ಯದಾರಗಳು ಲಭ್ಯವಿದ್ದ ಕಾರಣ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆಯನ್ನು ಸಲ್ಲಿಸಲಾಯಿತು.

15. ಸಾಕ್ಷಿಯು ಈಗಾಗಲೇ ಗುರುತಿಸಿದ ಪಿರ್ಯಾದಿಯಾದ ನಿಪಿ- 1 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

16. ಸಾಕ್ಷಿಯು ಈಗಾಗಲೇ ಗುರುತಿಸಿದ ಸ್ಥಳಪಂಚನಾಮೆಯಾದ ನಿಪಿ-2 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು.

17. ಸಾಕ್ಷಿಯು ನಿಪಿ-3 ಮತ್ತು 4 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-3/4 ಎ ಎಂದು ಗುರುತಿಸಲಾಯಿತು.

18. ಸಾಕ್ಷಿಯು ಈಗಾಗಲೇ ಗುರುತಿಸಿದ ಆರೋಪಿ ತೋರಿಸಿದ ಘಟನಾಸ್ಥಳ ಪಂಚನಾಮೆ ನಿಪಿ-5 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-5 ಬಿ ಎಂದು ಗುರುತಿಸಲಾಯಿತು.

19. ಸಾಕ್ಷಿಯು ನಿಪಿ-6 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು.

20. ಸಾಕ್ಷಿಯು ಈಗಾಗಲೇ ಗುರುತಿಸಿದ ಮೋಟಾರ ಸೈಕಲ ಜಪ್ತುಪಂಚನಾಮೆಯಾದ ನಿಪಿ-7 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-7 ಬಿ ಎಂದು ಗುರುತಿಸಲಾಯಿತು. ನಿಪಿ-8 ಅನ್ನು ನೋಡಿ ಗುರುತಿಸಿದ ಕಾರಣ ಸಾಕ್ಷಿಯ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು.

21. ಸಾಕ್ಷಿಯು ಈಗಾಗಲೇ ಗುರುತಿಸಿದ ಮೋಟಾರ ಸೈಕಲ ಜಪ್ತುಪಂಚನಾಮೆಯಾದ ನಿಪಿ-9 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-9 ಬಿ ಎಂದು ಗುರುತಿಸಲಾಯಿತು.

22. ಸಾಕ್ಷಿಯು ನಿಪಿ-10 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು.

23. ಸಾಕ್ಷಿಯು ಪ್ರ ವ ವ ಅನ್ನು ನೋಡಿ ಗುರುತಿಸಿದ್ದು , ಸದರಿ ಪ್ರ ವ ವ ಅನ್ನು ನಿಪಿ-30 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-30 ಎ ಎಂದು ಗುರುತಿಸಲಾಯಿತು.

24. ಸಾಕ್ಷಿಯು ಪಿ ಎಫ್ ಅನ್ನು ನೋಡಿ ಗುರುತಿಸಿದ್ದು , ಪಿ ಎಫ್ ಅನ್ನು ನಿಪಿ-31 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-31 ಎ ಎಂದು ಗುರುತಿಸಲಾಯಿತು.

25. ಸಾಕ್ಷಿಯು ನಿಪಿ-11 ಮತ್ತು 12 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 11/12 ಎ ಎಂದು ಗುರುತಿಸಲಾಯಿತು.

26. ಸಾಕ್ಷಿಯು ನಿಪಿ-13 ಮತ್ತು 14 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 13/14 ಎ ಎಂದು ಗುರುತಿಸಲಾಯಿತು.

27. ಸಾಕ್ಷಿಯು ನಿಪಿ-15 ಮತ್ತು 16 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 15/16 ಎ ಎಂದು ಗುರುತಿಸಲಾಯಿತು.

28. ಸಾಕ್ಷಿಯು ನಿಪಿ-17 ಮತ್ತು 18 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 17/18 ಎ ಎಂದು ಗುರುತಿಸಲಾಯಿತು.

29. ಸಾಕ್ಷಿಯು ನಿಪಿ-19 ಮತ್ತು 20 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 19/20 ಎ ಎಂದು ಗುರುತಿಸಲಾಯಿತು.

30. ಸಾಕ್ಷಿಯು ನಿಪಿ-21 ಮತ್ತು 22 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 21/22 ಎ ಎಂದು ಗುರುತಿಸಲಾಯಿತು.

31. ಸಾಕ್ಷಿಯು ನಿಪಿ-23 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 23 ಎ ಎಂದು ಗುರುತಿಸಲಾಯಿತು.

32. ಸಾಕ್ಷಿಯು ನಿಪಿ-24 ಮತ್ತು 25 ಅನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು 24/25 ಎ ಎಂದು ಗುರುತಿಸಲಾಯಿತು.

33. ಸಾಕ್ಷಿಯು ಈಗಾಗಲೇ ಗುರುತಿಸಿದ ಪ್ರಮಾಣಪತ್ರವಾದ ನಿಪಿ-27 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-27 ಬಿ ಎಂದು ಗುರುತಿಸಲಾಯಿತು.

34. ಸಾಕ್ಷಿ ನಿಪಿ-28 ಮತ್ತು 29 ಅನ್ನು ನೋಡಿ ಗುರುತಿಸಿರುತ್ತಾರೆ.

35. ಸಾಕ್ಷಿಯು ನಿಪಿ-8 ರಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

36. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಎಲ್ ಎ ಡಿ ಸಿ ವಕೀಲರಿಂದ:**

ನಾನು ಗುನ್ನಾ ಸಂಖ್ಯೆ: 53/2025 ರಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ . ನಾನು ಈಗ ಪೊಲೀಸ ಇನ್‌ಸ್ಪೆಕ್ಟರ್ ಸೈಬರ ಕ್ರೈಂ ಹುಬ್ಬಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪ್ರಸ್ತುತ ಪ್ರಕರಣದಲ್ಲಿ ನಾನು ಒಬ್ಬನೇ ತನಿಖೆಯನ್ನು ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆಯನ್ನು ಸಲ್ಲಿಸಿರುತ್ತೇನೆ. ಅಪರಾಧ ಸಂಖ್ಯೆ: 53/2025 ರಲ್ಲಿ 1 ರಿಂದ 18 ಕ್ರಮ ಸಂಖ್ಯೆಯನ್ನು ನಾನೇ ತನಿಖೆಯನ್ನು ಮಾಡಿರುತ್ತೇನೆ ಮತ್ಯಾರು ಮಾಡಿರುವುದಿಲ್ಲ. ಚಾಸಾ-1 ರವರು ಫಿರ್ಯಾದಿಯನ್ನು ದಿ: 11-04-2025 ರಂದು ನೀಡಲು ಬಂದಿದ್ದರು. ಚಾಸಾ-1 ರವರು ಫಿರ್ಯಾದಿಯನ್ನು ದಸ್ತುರ ಹೇಳಿಕೆ ರೂಪವಾಗಿ ನೀಡಿರುತ್ತಾರೆ. ಸಾಕ್ಷಿಗೆ ನಿಪಿ-1 ರ 2 ನೇ ಪುಟವನ್ನು

ತೋರಿಸಿದ್ದು ಅದರಲ್ಲಿ ದಿನಾಂಕ ನಮೂದು ಇಲ್ಲ ಎಂದರೆ ಸಾಕ್ಷಿಯು 2 ನೇ ಪುಟ್ಟದಲ್ಲಿ ಇಲ್ಲ ಆದರೆ 1 ನೇ ಪುಟದಲ್ಲಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಮಹಾಲಿಂಗಪುರ ಸಾರ್ವಜನಿಕ ಸ್ಥಳದಲ್ಲಿ ಇರುತ್ತದೆ ಎಂದರೆ ಹೌದು. ದೋಷಾರೋಪಣೆ 11 ನೇ ಕಾಲಂನಲ್ಲಿ ಒಟ್ಟು 9 ಮೋಟಾರ ಸೈಕಲಗಳಿದ್ದು , ಪ್ರತಿಯೊಂದು ಮೋಟಾರ ಸೈಕಲಿನ ಬೇರೆ ಬೇರೆ ಮುಖಬೆಲೆಯನ್ನು ನಮೂದಿಸಲಾಗಿರುತ್ತದೆ. ಐಟಂ ನಂ. 1 ಮೋಟಾರ ಸೈಕಲ್ ರೂ.45,000/- , ಐಟಂ ನಂ. 2 ಮೋಟಾರ ಸೈಕಲ್ ರೂ.95,000/- , ಐಟಂ ನಂ. 3 ಮೋಟಾರ ಸೈಕಲ್ ರೂ.30,000/- , ಐಟಂ ನಂ. 4 ಮೋಟಾರ ಸೈಕಲ್ ರೂ.95,000/- , ಐಟಂ ನಂ. 5 ಮೋಟಾರ ಸೈಕಲ್ ರೂ.15,000/- , ಐಟಂ ನಂ. 6 ಮೋಟಾರ ಸೈಕಲ್ ರೂ.80,000/- , ಐಟಂ ನಂ. 7 ಮೋಟಾರ ಸೈಕಲ್ ರೂ.75,000/- , ಐಟಂ ನಂ. 8 ಮೋಟಾರ ಸೈಕಲ್ ರೂ.50,000/- ಮತ್ತು ಐಟಂ ನಂ. 9 ಮೋಟಾರ ಸೈಕಲ್ ರೂ.90,000/- ಮುಖಬೆಲೆಯದು ಇರುತ್ತದೆ.

2. ಚಾಸಾ-1 ರಿಂದ 7 ರವರು ನನಗೆ ಲಿಖಿತವಾದ ಪಿರ್ಯಾದಿಯನ್ನು ನೀಡಿರುವುದಿಲ್ಲ , ಕೇವಲ ಒಬ್ಬರೇ ಪಿರ್ಯಾದಿಯನ್ನು ನೀಡಿರುತ್ತಾರೆ. ಆರೋಪಿತನೇ ಠಾಣೆಯಲ್ಲಿ ತನ್ನ ಸ್ವ ಖುಷಿ ಹೇಳಿಕೆಯಲ್ಲಿ ಸದರಿ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ಆರೋಪಿತನು ನೇರವಾಗಿ ನಮ್ಮ ಠಾಣೆಗೆ ಬಂದಿರುವುದಿಲ್ಲ. ಆತನ ವಾಹನವನ್ನು ತಪಾಸಣೆ ಮಾಡಿದಾಗ ನೋಂದಣಿ ಸಂಖ್ಯೇ ಇರದ ಕಾರಣ ಸಂಶಯಾಸ್ಪದವಾಗಿ ಆರೋಪಿತನ್ನು ಠಾಣೆಗೆ ಕರೆದುಕೊಂಡು ವಿಚಾರಣೆ ಮಾಡಲಾಗಿರುತ್ತದೆ. ಚಾಸಾ-14 ರವರು ನನ್ನ ಜೊತೆಗೆ ವಾಹನ ತಪಾಸಣೆಗಾಗಿ ಚೆಕ್ಕ ಪೋಸ್ಟ ನಲ್ಲಿ ಇದ್ದರು. ಆರೋಪಿತನ್ನು ಠಾಣೆಯಲ್ಲಿ ದಸ್ತಗಿರ ಮಾಡಲಾಯಿತು. ನ್ಯಾಯಾಲಯಕ್ಕೆ ಹಾಜರು ಮಾಡುವ ಮುನ್ನ ಆರೋಪಿತನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿರುತ್ತದೆ. ಘಟನಾಸ್ಥಳದ ಪಂಚನಾಮೆ ಸ್ಥಳದ ಚಕ್ಕಬಂದಿ ಪೂರ್ವಕ್ಕೆ - ಪಿ ಕೆ ಪಿಎಸ್ ಖಲ್ಲಾ ಜಾಗೆ, ಪಶ್ಚಿಮಕ್ಕೆ- ಖಾಲಿ ಜಾಗ, ಉತ್ತರಕ್ಕೆ - ಪಿ ಕೆ ಪಿಎಸ್ ಸೊಸೈಟಯ ಪತ್ರಾಸ ಶೆಡ್ , ದಕ್ಷಿಣಕ್ಕೆ - ಚಿಮ್ಮಡ-ಜಗದಾಳ ಡಾಂಬರ ರಸ್ತೆ ಇರುತ್ತದೆ. ಸದರಿ ಪಂಚನಾಮೆಯ ಹಾತನಕಾಶೆಯಲ್ಲಿ ಸದರಿ ಚೆಕ್ಕಬಂದಿಗಳನ್ನು ವಿವರವಾಗಿ ತೋರಿಸಲಾಗಿದೆ ಮತ್ತು ಭಾವಚಿತ್ರವನ್ನು ಪಡೆಯಲಾಗಿದೆ. ಸದರಿ ಹಾತನಕಾಶೆಯಲ್ಲಿ ಚೆಕಬಂದಿಯಕುರಿತು ವಿವರವಾಗಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಕಾಲಕ್ಕೆ ವೀಡಿಯೋ ಅನ್ನು ಮಾಡಲಾಗಿದೆ. ನಮ್ಮ

ಸಿಬ್ಬಂದಿಯಿಂದ ಭಾವಚಿತ್ರವನ್ನು ಹಾಗೂ ವೀಡಿಯೋಗಳನ್ನು ತೆಗೆಯಲು ಒಬ್ಬರು ಇರುತ್ತಾರೆ ಎಂದರೆ ಸರಿಯಲ್ಲ. ಚಾಸಾ-13 ರವರನ್ನು ನಾವೇ ಪತ್ರವನ್ನು ಸಲ್ಲಿಸಿ ಭಾವಚಿತ್ರ ಹಾಗೂ ವಿಡೀಯೋ ಮಾಡಿಸಲು ಕರೆದುಕೊಂಡು ಹೋಗಿರುತ್ತೇವೆ. ಚಿಮ್ಮಡ-ಜಗದಾಳ ರೋಡಿಗೆ ಸಾಕಷ್ಟು ಕಿರಾಣಿ ಅಂಗಡಿಗಳು ಇವೆ ಎಂದರೆ ಸರಿಯಲ್ಲ. ಪಿ ಕೆ ಪಿಎಸ್ ಸೊಸೈಟಿಯ ಆವರಣದಲ್ಲಿ ಸಿ ಸಿ ಟಿವಿ ಕ್ಯಾಮೆರಾಗಳು ಇರುವುದಿಲ್ಲ. ಊರಿನ ನಂತರ 200 ಮೀಟರ ಅಂತರದಲ್ಲಿ ಸಿಸಿ ಕ್ಯಾಮೆರಾ ಕೂಡಿಸಬೇಕೆಂಬ ನಿಯಮ ಇರುವುದಿಲ್ಲ. ಚಾಸಾ-6 ಮತ್ತು 7 ರವರನ್ನು ಆರೋಪಿಯ ಸಂಬಂಧಿಕರ ಮನೆಯಲ್ಲಿ ವಾಹನಗಳನ್ನು ಬಚ್ಚಿಟ್ಟ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆವು. ಆ ಕಾಲಕ್ಕೆ ಸದರಿ ಸ್ಥಳದಲ್ಲಿ ಪಂಚನಾಮೆಯಲ್ಲಿ ನಮ್ಮ ಸಿಬ್ಬಂದಿಯಾದ ಪಿ ಎಸ ಚವಳಗಿಯವರು ಬರೆದಿರುತ್ತಾರೆ . ಸದರಿಯವರು ಸಾಕ್ಷಿದಾರರನ್ನಾಗಿ ಯಾಕೆ ಮಾಡಲಾಗಿಲ್ಲ ಎಂಬ ಪ್ರಶ್ನೆಗೆ ನಾನು ತನಿಖಾಧಿಕಾರಿ ಇದ್ದ ಕಾರಣ ನಾನು ಹೇಳಿದಂತೆ ಸದರಿಯವರು ಪಂಚನಾಮೆಯನ್ನು ಬರೆದಿರುತ್ತಾರೆ, ಆದ ಕಾರಣ ಸಾಕ್ಷಿಗಾರರನ್ನಾಗಿ ಮಾಡಿರುವುದಿಲ್ಲ. ನಿಪಿ-8 ರಲ್ಲಿ ಕಬ್ಬಿನ ಗರಿಯನ್ನು ಇರುತ್ತದೆ , ಆದರೆ ಪೊದೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ಕೆನಾಲ ಇರುವುದಿಲ್ಲ . ಆದರೆ ಬೇರೆ ಆ್ಯಂಗಲನಲ್ಲಿ ಕೆನಾಲ ಇರುತ್ತದೆ. ನಿಪಿ-8 ರಲ್ಲಿ ಕಾಣಿಸಿದ ಪೊದೆ ಒಂದೇ ಇರುತ್ತದೆ. ನಿಪಿ-8 ರಲ್ಲಿರುವ ಸ್ಥಳ ತೋಟ ಇರುತ್ತದೆ. ನಿಪಿ-8 ರಲ್ಲಿರುವ ತೋಟದ ಉತಾರೆಯನ್ನು ನಾನು ಸಲ್ಲಿಸಿರುವುದಿಲ್ಲ. ನಿಪಿ-8 ರಲ್ಲಿ ಕೆನಾಲ್ ಕಾಣಿಸಿರುವುದಿಲ್ಲ, ಆದರೆ ಚಕ್ಕಬಂದಿಯಲ್ಲಿ ಹೇಳಲಾಗಿದೆ.

3. ನಿಪಿ-10 ಠಾಣೆಯಲ್ಲಿ ತೆಗೆಯಲಾಗಿದೆ. ನಿಪಿ-10 ಮೋಟಾರ ಸೈಕಲ ವಾಹನದ ಸಂಖ್ಯೆ ಕಾಣಿಸಿರುವುದಿಲ್ಲ. ನಿಪಿ-10 ರಲ್ಲಿ ಕಾಣಿಸಿದ ಮೋಟಾರ ಸೈಕಲ ಕುರಿತು ಆರ್ ಟಿ ಒ ವಿವರಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ-7 ರಲ್ಲಿ ನಮೂದಿಸಿದ ಸ್ವತ್ತಿನ ಸಂಖ್ಯೆ ನಿಪಿ-31 ರಲ್ಲಿ ನಮೂದಿಸಿದ ಸ್ವತ್ತಿನ ಸಂಖ್ಯೆ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಅನುಕ್ರಮ ಸಂಖ್ಯೆಃ 1 ರಲ್ಲಿ ಹೀರೋ ಸ್ಪ್ಲೆಂಡರ ಪ್ಲಸ ಕಪ್ಪು ಬಣ್ಣದ ಮೋಟಾರ ಸೈಕಲ್ ಎಂದು ನಮೂದಿಸಿದ್ದು , ಅದರಂತೆ ಅನುಕ್ರಮ ಸಂಖ್ಯೆಃ 3 ರಲ್ಲಿ ಹೀರೋ ಹೆಚ್ ಎಫ್ ಡಿಲಕ್ಸ ಕಂಪನಿಯ ಕಪ್ಪು ಬಣ್ಣದ ಮೋಟಾರ ಸೈಕಲ ಎಂದು ನಮೂದಿಸಿದ್ದು ಇರುತ್ತದೆ ಎಂದರೆ ಸಾಕ್ಷಿಯು ಪಿರ್ಯಾದಿಯಲ್ಲಿ ಕೆಂಪುಬಣ್ಣದು ಹಾಗೂ ನಿಪಿ-31 ರಲ್ಲಿ ಕಪ್ಪು ಬಣ್ಣದು ಎಂದು ತಪ್ಪಾಗಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ನಿಪಿ-19 ಮತ್ತು 20 ರಲ್ಲಿ ಕಾಣಿಸಿದ ವಾಹನವನ್ನು ಬಿಡುಗಡೆ ಮಾಡಿದ ಸಮಯದಲ್ಲಿ ನೋಂದಾಣಿ

ಸಂಖ್ಯೆಯ ಪ್ಲೇಟನ್ನು ಹಾಕಿ ಬಿಡುಗಡೆ ಮಾಡಿರುವುದಿಲ್ಲ. ಸದರಿ ಛಾಯಾಚಿತ್ರವನ್ನು ನಾಲ್ಕು ದಿಕ್ಕುಗಳಲ್ಲಿ ತೆಗೆಯಲಾಗಿರುತ್ತದೆ ಎಂದರೆ ಕೇವಲ ಎರಡು ದಿಕ್ಕಿನಲ್ಲಿ ತೆಗೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ-21 ಮತ್ತು 22 ರಲ್ಲಿ ಮೋಟಾರ್ ಸೈಕಲ ಸಂಖ್ಯೆ ಕಾಣುವುದಿಲ್ಲ. ಸದರಿ ಮೋಟಾರ ಸೈಕಲಿಗೆ ನಂಬರ ಪ್ಲೇಟನ್ನು ಹಾಕಿ ಕೊಡಲು ನಮಗೆ ಬರುವುದಿಲ್ಲ, ಯಾವ ಪ್ರಕರಣದಲ್ಲಿ ಸಿಕ್ಕಿರುತ್ತದೆ ಆ ಪ್ರಕರಣಕ್ಕೆ ಒಪ್ಪಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಮೋಟಾರ ಸೈಕಲ್ ಸಂಖ್ಯೆಃ KA-48-X-9423 ರ ಆರ್.ಸಿ ಕಾರ್ಡ ಪ್ರತಿಯನ್ನು ಮತ್ತು ವಿಮಾ ಪಾಲಸಿಯನ್ನು ಮಾಲೀಕರೇ ತಂದು ಕೊಟ್ಟಿರುತ್ತಾರೆ, ಸದರಿ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಸದರಿ ಆರ್.ಸಿ ಕಾರ್ಡನ್ನು ನಿಡಿ-1 ಎಂದು ಹಾಗೂ ವಿಮಾ ಪಾಲಿಸಿಅನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಪಿ-10 ವಾಹನ ಬಿಡುಗಡೆ ಕಾಲಕ್ಕೆ ಪೊಲೀಸ ಠಾಣೆಯಲ್ಲಿ ತೆಗೆಯಲಾದ ಛಾಯಾಚಿತ್ರಗಳು . ಚಾಸಾ-13 ರವರು ಸದರಿ ಛಾಯಾಚಿತ್ರಗಳನ್ನು ತೆಗೆದು ದಿಃ 19-05-2025 ರಂದು ಕೊಟ್ಟಿರುತ್ತಾರೆ. ನಿಪಿ-27 ಅನ್ನು ಚಾಸಾ-13 ರವರೇ ಟೈಪ್ ಮಾಡಿಕೊಟ್ಟಿರುತ್ತಾರೆ. ನಿಪಿ-28 ಮತ್ತು 29 ಅನ್ನು ಚಾಸಾ-13 ರವರೇ ಕೊಟ್ಟಿರುತ್ತಾರೆ. ನಿಪಿ-28 ಮತ್ತು 29 ಅನ್ನು ಚಾಸಾ-13 ರವರೇ ಬರೆದು ಸಹಿ ಮಾಡಿಕೊಟ್ಟಿರುತ್ತಾರೆ. ಹೆಚ್ಚಿನ ಸಾಕ್ಷಿಗಾಗಿ ಬೇರೆ ಯಾರನ್ನು ವಿಚಾರಿಸಲು ಅವಶ್ಯ ಇರಲಿಲ್ಲ . ಆರೋಪಿಯ ಬೆರಳಚ್ಚು ಮುದ್ರಣ ತಪಾಸಣೆ ಮಾಡಿರುವುದಿಲ್ಲ. ಸದರಿ ಘಟನಾಸ್ಥಳದ ಪಂಚನಾಮೆಯಕಾಲಕ್ಕೆ ಆರೋಪಿತನು ನಿಂತ ಸ್ಥಳದ ಮಣ್ಣಿನ ಪರೀಕ್ಷೆಯನ್ನು ಮಾಡಿರುವುದಿಲ್ಲ. ಆರೋಪಿಯು ಯಾವುದೇ ಮದ್ಯಪಾನ ಮಾಡದೇ ಸ್ವಖುಷಿ ಹೇಳಿಕೆಯನ್ನು ನೀಡಿರುತ್ತಾನೆ. ಚಾಸಾ-1 ರವರು ನನಗೆ ಸಂಪೂರ್ಣ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಮತ್ತು ನಾವು ನೀಡಿದ ದಾಖಲಾತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ತನಿಖಾಧಿಕಾರಿ ನಾನು ಒಬ್ಬನೇ ಇದುದ್ದರಿಂದ ಸತ್ಯವನ್ನು ಬಚ್ಚಿಟ್ಟ ಸುಳ್ಳು ಕಥೆಯನ್ನು ಸೃಷ್ಟಿಸಿ ಸುಳ್ಳು ತನಿಖೆಯನ್ನು ಕೈಗೊಂಡು ಆರೋಪಿಯನ್ನು ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬನಹಟ್ಟಿ.